ಇ) ಸದರಿ ಆಸ್ಪತ್ರೆಯ ಕಟ್ಟಡವನ್ನು 1955–1959 ರಲ್ಲಿ ನಿರ್ಮಿಸಿ, ದಿ: 25–11–1959ರಲ್ಲಿ ಉದ್ಘಾಟನೆಗೊಂಡಿರುತ್ತದೆ. ಕಟ್ಟಡವಿರುವ ನಿವೇಶನವು ಕೋಲಾರ ತಾಲ್ಲೂಕಿನ ಗಾಜಲುದಿನ್ನೆ ಪ್ಲಾಂಟೇಶನ್ ರಾಜ್ಯ ಅರಣ್ಯ ಬ್ಲಾಕ್ "ಎ" ಸೇರಿದ ಗಾಜಲುದಿನ್ನೆ ಗ್ರಾಮದ ಸರ್ವೆ ನಂಬರ್: 12ಕ್ಕೆ ಸೇರಿದ್ದು, 22 ಎಕರೆ 36 ಗುಂಟೆ ವಿಸ್ತೀರ್ಣವನ್ನು ಹೊಂದಿರುತ್ತದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅನುದಾನ ದುರುಪಯೋಗ

5168 (5329); ಶ್ರೀ ನಾರಾಯಣಸ್ವಾಮಿ ಎಸ್.ಎನ್. (ಬಂಗಾರಪೇಟೆ)

ಅ) ಬಂಗಾರಪೇಟೆ ತಾಲೂಕಿನಲ್ಲಿ ದಿನಾಂಕ: 01–04–2013 ರಿಂದ 30–10–2015 ರವರೆಗೆ ಇಲಾಖೆಯಿಂದ ಕೈಗೊಂಡಿರುವ ಅಭಿವೃದ್ಧಿ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಯಾವುವು?

ಆ) ಸರ್ಕಾರದಿಂದ ಬಿಡುಗಡೆಯಾಗಿರುವ ಹಾಗೂ ಖರ್ಚಾಗಿರುವ ಅನುದಾನವೆಷ್ಟು? (ಸಂಪೂರ್ಣ ವಿವರ ನೀಡುವುದು)

ಇ) ಸರ್ಕಾರದಿಂದ ಕಾರ್ಯಕ್ರಮಗಳಿಗೆ ಬಿಡುಗಡೆಯಾಗಿರುವ ಅನುದಾನ ದುರ್ಬಳಕೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಎಷ್ಟು ದುರುಪಯೋಗವಾಗಿದೆ? (ಮಾಹಿತಿ ನೀಡುವುದು)

ಶ್ರೀಮತಿ ಉಮಾಶ್ರೀ (ಮಾನ್ಯ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲ ಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

ಅ) ಯಾವುದೇ ಅಭಿವೃದ್ಧಿಕಾಮಗಾರಿಗಳು ಇರುವುದಿಲ್ಲ.

ಸಾಂಸ್ಕೃತಿಕ ಕಾರ್ಯಕ್ರಮಗಳು:

ದಿನಾಂಕ:1–4–2013 ರಿಂದ 30–10–2015ರ ವರೆಗೆ ಇಲಾಖೆಯಿಂದ ಕೈಗೊಂಡಿರುವ ಅಭಿವೃದ್ಧಿ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು

ಸಾಮಾನ್ಯ ಪ್ರಾಯೋಜಿತ ವಿಶೇಷ ಘಟಕ, ಗಿರಿಜನ ಉಪಯೋಜನೆ, ಸಾಂಸ್ಕೃತಿಕ ಸೌರಭ, ಚಿಗುರು, ಯುವಸೌರಭ, ಹಾಡಿರೆ ರಾಗಗಳ, ತೂಗಿರೇ ದೀಪಗಳ, ವಾದ್ಯಪರಿಕರಗಳು ಇತ್ಯಾದಿ

ಆ) 2013–14ನೇ ಸಾಲಿನಲ್ಲಿ ಬಿಡುಗಡೆಯಾದ ಮೊತ್ತ ರೂ. 3,05,500/–

ಸ್ಥಳೀಯ ಪ್ರಾಯೋಜಿತ	ರೂ. 50,000/–
ಸೌರಭ	ರೂ. 50,000/–
ಚಿಗುರು ಕಾರ್ಯಕ್ರಮ	ರೂ. 25,000/–
ಯುವಸೌರಭ	ರೂ. 30,000/–
ಹಾಡಿರೆ ರಾಗಗಳ ತೂಗಿರೇ ದೀಪಗಳ	ರೂ. 10,000/–
ರಸಗ್ರಹಣ ಕಾರ್ಯಕ್ರಮಕ್ಕೆ	ರೂ. 5500/–
ವಿಶೇಷಘಟಕ ಯೋಜನೆಗೆ	ರೂ.75,000/–
ಗಿರಿಜನ ಉಪಯೋಜನೆಯಡಿ	ರೂ. 50,000/–
ವಾದ್ಯಪರಿಕರಗಳಿಗೆ	ರೂ. 10,000/–

2014–15ನೇ ಸಾಲಿನಲ್ಲಿ ಸ್ಥಳೀಯ ಪ್ರಾಯೋಜಿತ ಕಾರ್ಯಕ್ರಮದಡಿ 13 ಕಾರ್ಯಕ್ರಮಗಳು ವಿಶೇಷಘಟಕ ಕಾರ್ಯಕ್ರಮ 15, ಗಿರಿಜನಉಪಯೋಜನೆಯಡಿ 3 ಕಾರ್ಯಕ್ರಮಗಳನ್ನು ಪ್ರಾಯೋಜಿಸಲಾಗಿದೆ. ಪ್ರಾಯೋಜಿಸಿದ ಮೊತ್ತವನ್ನು ಕಲಾವಿದರುಗಳಿಗೆ ನೇರವಾಗಿ ಎನ್.ಇ.ಎಫ್.ಟಿ ಮೂಲಕ ಕಳುಹಿಸಿಕೊಡಲಾಗಿದೆ.

2014–15ನೇ ಸಾಲಿನಲ್ಲಿ ಖರ್ಚಾಗಿರುವ ಮೊತ್ತ ರೂ. 4,50,000/–

ಇ) ಇಲ್ಲ.